# ಶ್ರೀಮಾತೆಯವರ ಸ್ಮೃತಿಸೌರಭ

ಮೂಲ ಬಂಗಾಳಿ : **ಅಭಯಶಂಕರ ರಾಯ್** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ನನ್ನ ಕಿರಿಯ ಅಣ್ಣನ ಪತ್ನಿ ಹೇಮಪ್ರಭಾ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದಿದ್ದರು. ಅವರಿಂದಲೇ ನಾನು ಹಾಗೂ ನನ್ನ ಪತ್ನಿ ನಿರುಪಮಾ ಶ್ರೀಮಾತೆಯವರ ಬಗ್ಗೆ ತಿಳಿದಿದ್ದೆವು. ನಮ್ಮ ಪೂರ್ವಜರ ಮನೆಯಿದ್ದುದು ಮಾಣಿಕಗಂಜ್ ಜಿಲ್ಲೆಯ (ಈಗ ಬಾಂಗ್ಲಾದೇಶದಲ್ಲಿದೆ) ತೇವುತಾ ಎಂಬ ಗ್ರಾಮದಲ್ಲಿ. ಕಲ್ಕತ್ತದಲ್ಲಿ ಯೂರೋಪಿಯನ್ ಎಸೈಲಮ್ ಲೇನ್‌ನ ೪೪ನೇ ನಂಬರಿನ ಮನೆ ನಮ್ಮದು. (ಈಗ ಅಂದುಲ್ ಹಾಲಿಮ್ ಲೇನ್, ಕಲ್ಕತ್ತಾ– ೭೦೦೦೧೬).

ನನಗೆ ದೀಕ್ಷೆ ಪಡೆದುಕೊಳ್ಳಲು ಯಾವುದೇ ರೀತಿಯಲ್ಲಿ ಮನಸ್ಸಿರಲಿಲ್ಲ. ಇದರ ವಿಷಯವಾಗಿ ನನ್ನ ಅತ್ತಿಗೆಯವರೇ ಎಲ್ಲ ವ್ಯವಸ್ಥೆಯನ್ನೂ ಮಾಡಿದ್ದರು. ಅವರಿಂದಾಗಿಯೇ ನನ್ನ ಪತ್ನಿ ನಿರುಪಮಾ ಶ್ರೀಮಾತೆಯವರಿಂದ ದೀಕ್ಷೆ ಪಡೆಯಲು ಸಾಧ್ಯವಾಯಿತು. ಶ್ರೀಮಾತೆಯವರ ನಿರ್ದೇಶನದಂತೆ, ಅವರು ಹೇಳಿದ ದಿನದಂದು ಬೆಳಿಗ್ಗೆ ಬೇಗನೆ ಬಾಗ್‌ಬಜಾರಿನಲ್ಲಿದ್ದ 'ಶ್ರೀಮಾತೆಯವರ ಮನೆ' ಗೆ ('ಉದ್ಬೋಧನ') ನಾನು ಪತ್ನಿಯೊಂದಿಗೆ ಹೋಗಿದ್ದೆ. ನನಗೆ ದೀಕ್ಷೆ ಪಡೆಯುವ ಇಚ್ಛೆಯಿರಲೇ ಇಲ್ಲವೆಂದು ಈಗಾಗಲೇ ಹೇಳಿದ್ದೇನೆ. ಆದರೆ ಅಂದು ರಾತ್ರಿಯ ಕೊನೆಯ ಭಾಗದಲ್ಲಿ ಒಂದು ಅದ್ಭುತ ಘಟನೆ ನಡೆಯಿತು. ಆಗ ನಾನು ಮಂಚದಲ್ಲಿ ಮಲಗಿದ್ದೆ. ಅರೆನಿದ್ದೆ– ಅರೆ ಎಚ್ಚರದ ಅವಸ್ಥೆಯಲ್ಲಿದ್ದ ನಾನು ಶ್ರೀರಾಮಕೃಷ್ಣರು ನನ್ನೆದುರು ನಿಂತುಕೊಂಡಿದ್ದುದನ್ನು ಕಂಡೆ. ಅವರು ನನಗೆ, ''ಇನ್ನೂ ನಿನ್ನ ಗೊಂದಲ ಹೋಗಿಲ್ಲವೆ? ಹೋಗು, ನೀನೂ ಕೂಡ ಜೊತೆಗೇ ದೀಕ್ಷೆ ಪಡೆದುಕೋ'' ಎಂದರು. ಈ ಮಾತುಗಳನ್ನು ಹೇಳಿ ಅವರು ಅದೃಶ್ಯರಾದರು. ಶ್ರೀರಾಮಕೃಷ್ಣರ ದರ್ಶನ ಹಾಗೂ ಅವರ ಮಾತುಗಳನ್ನು ಕೇಳಿದ ನಂತರ ನನಗೆ ತುಂಬಾ ಆನಂದವಾಯಿತು. ಆದರೆ, ಅದರೊಂದಿಗೇ ತುಸು ಆತಂಕವೂ ಉಂಟಾಯಿತು. ಏಕೆಂದರೆ, ಸ್ವಲ್ಪ ಹೊತ್ತಿನಲ್ಲೇ ನಾನು ನನ್ನ ಪತ್ನಿಯನ್ನು ಕರೆದುಕೊಂಡು ಬಾಗ್‌ಬಜಾರಿಗೆ ಹೋಗಬೇಕಿತ್ತು. ಅವಳ ದೀಕ್ಷೆಗಾಗಿ ಅಗತ್ಯವಿದ್ದ ಎಲ್ಲ ವಸ್ತುಗಳನ್ನೂ ಸಂಗ್ರಹಿಸಿ, ವ್ಯವಸ್ಥೆ ಮಾಡಿದ್ದಾಗಿದೆ. ಆದರೆ ನನ್ನ ದೀಕ್ಷೆಗಾಗಿ ಏನೂ ಮಾಡಿಲ್ಲ! ಅಷ್ಟೊಂದು ಬೇಗನೆ ಎಲ್ಲವನ್ನೂ ಸಂಗ್ರಹಿಸುವುದಾದರೂ ಹೇಗೆ? ಏನೇ ಇರಲಿ, ಕನಸಿನಲ್ಲಿ ಠಾಕೂರರು ನಿರ್ದೇಶಿಸಿದಂತೆ, ಪತ್ನಿಯನ್ನು ಕರೆದುಕೊಂಡು ನಾನು 'ಶ್ರೀಮಾತೆಯವರ ಮನೆ' ಯನ್ನು ತಲುಪಿದೆ. ಶ್ರೀಮಾತೆಯವರಿಗೆ ಪ್ರಣಾಮ ಮಾಡಿದ ಕೂಡಲೇ ಅವರು ಸ್ನೇಹಪೂರಿತವಾದ ಧ್ವನಿಯಿಂದ ಕೇಳಿದರು, ''ನಿನಗಂತೂ ಇನ್ನು ಗೊಂದಲವಿಲ್ಲ, ಮಗೂ! ಹೋಗು, ಗಂಗಾಸ್ನಾನ ಮಾಡಿ ಬಾ. ಸೊಸೆಯಮ್ಮನ (ಅಂದರೆ, ನನ್ನ ಪತ್ನಿಯ) ವಸ್ತುಗಳಿಂದಲೇ ನಿಮ್ಮಿಬ್ಬರ ದೀಕ್ಷೆ ನಡೆಯುವುದು'' ಎಂದರು. ಶ್ರೀಮಾತೆಯವರ ಬಾಯಿಯಿಂದ ಈ ಮಾತುಗಳನ್ನು ಕೇಳಿದ ನನಗೆ ಉಕ್ಕಿ ಬಂದ ಕಣ್ಣೀರನ್ನು ತಡೆದುಕೊಳ್ಳಲಾಗಲಿಲ್ಲ. ನನಗೆ ಅನ್ನಿಸಿದ್ದು ಇಷ್ಟು ಮಾತ್ರ – ನನ್ನ ಕನಸಿನ ವಿಷಯ ಹಾಗೂ, ನನ್ನ ಸಮಸ್ಯೆಯ ಬಗ್ಗೆ ಶ್ರೀಮಾತೆಯವರಿಗೆ ಹೇಗೆ ತಿಳಿಯಿತು? ಅಂದರೆ ಶ್ರೀಮಾತೆಯವರು ನಿಜಕ್ಕೂ ಅಂತರ್ಯಾಮಿನಿಯಾದ ಜಗಜ್ಜನನಿಯೆ? ಸರಿಯಾದ ಸಮಯದಲ್ಲಿ ಶ್ರೀಮಾತೆಯವರಿಂದ ನನ್ನ ಹಾಗೂ ಪತ್ನಿಯ ದೀಕ್ಷೆ ನಡೆಯಿತು. ಇದು ನಡೆದುದು ೧೯೧೧ರಲ್ಲಿ.

ದುಃಖದ ವಿಷಯವೇನೆಂದರೆ, ಯಾರಿಂದಾಗಿ ನಾವು ಶ್ರೀಮಾತೆಯವರ ಚರಣಗಳಲ್ಲಿ ಆಶ್ರಯವನ್ನು ಪಡೆದೆವೋ, ಆ ಅತ್ತಿಗೆ ಹೇಮಪ್ರಭಾ ಸಣ್ಣ ವಯಸ್ಸಿನಲ್ಲೇ ತಮ್ಮ ಇಬ್ಬರು ಗಂಡು ಮಕ್ಕಳನ್ನು ಅಗಲಿ ತೀರಿಕೊಂಡರು. ಅವರು ತೀರಿಕೊಂಡ ಕೆಲವು ವರ್ಷಗಳಲ್ಲೇ ಅವರ ಇಬ್ಬರ ಮಕ್ಕಳೂ ತೀರಿಕೊಂಡವು. ಉತ್ತಮ ವ್ಯಕ್ತಿತ್ವವನ್ನು ಹೊಂದಿದ್ದ, ಕೆಟ್ಟ ಸಂಸ್ಕಾರಗಳಿಲ್ಲದ, ಹಾಗೂ ಶ್ರೀಮಾತೆಯವರಲ್ಲೇ ಶರಣಾಗತಿ ಹೊಂದಿದ್ದ ಹೇಮಪ್ರಭಾ, ಶ್ರೀಮಾತೆಯವರಿಂದ ಬಹಳಷ್ಟು ಪ್ರೀತಿಯನ್ನು ಪಡೆದಿದ್ದರು. ನಮ್ಮ ಕುಟುಂಬದ ಮೇಲೆ ಹೇಮಪ್ರಭಾ ಅವರ ಪ್ರಭಾವ ವಿಶೇಷವಾಗಿ ಇತ್ತು ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ.

ನನ್ನ ಪತ್ನಿ ನಿರುಪಮಾ ಕೂಡ ಶ್ರೀಮಾತೆಯವರ ವಿಶೇಷ ಪ್ರೀತಿಗೆ ಪಾತ್ರಳಾಗಿದ್ದಳು. ೧೯೧೫ರಿಂದ ೧೯೨೦ರ ನಡುವೆ ಅವಳು ಶ್ರೀಮಾತೆಯವರಿಂದ ೪೦–೪೫ ಪತ್ರಗಳನ್ನು ಪಡೆದಿದ್ದಳು. ನನ್ನ ದೊಡ್ಡ ಮಗ ಮತ್ತು ದೊಡ್ಡ ಮಗಳು ಹೆಚ್ಚಾಗಿ ಕಾಯಿಲೆ ಬೀಳುತ್ತಿದ್ದರು. ಅವರಿಗೆ ವಾಸಿಯಾಗಲಿ ಎಂದು ನಿರುಪಮಾ ಅವರನ್ನು ಹೆಚ್ಚಾಗಿ ಶ್ರೀಮಾತೆಯವರ ಆಶೀರ್ವಾದ ಪಡೆಯಲು ಅವರ ಬಳಿಗೆ ಕಳುಹಿಸುತ್ತಿದ್ದಳು. ಶ್ರೀಮಾತೆಯವರು ಕೂಡ ಕರುಣಾಪರವಶರಾಗಿ ಅವರಿಗೆ ಶ್ರೀರಾಮಕೃಷ್ಣರ ಹೆಸರಿನಲ್ಲಿ ಆಶೀರ್ವಾದ ಮಾಡುತ್ತಿದ್ದರು. ಅವರ ಆಶೀರ್ವಾದದ ಬಲದಿಂದ ನನ್ನ ಇಬ್ಬರು ಮಕ್ಕಳೂ ಗುಣಮುಖರಾಗಿದ್ದರು.

ಶ್ರೀಮಾತೆಯವರ ಪತ್ರಗಳಲ್ಲಿ ಬಹುಪಾಲು ಜಯರಾಮಬಾಟಿಯಿಂದ ಬರೆದವು. ಹೆಚ್ಚಿನವನ್ನು ನಳಿನೀ–ದೀದಿ ಬರೆದಿದ್ದಳು. ಅದಲ್ಲದೆ, ರಾಸಬಿಹಾರಿ ಮಹಾರಾಜ್ ಹಾಗೂ ಜ್ಯೋತಿಪ್ರಕಾಶ್ ಮಹಾರಾಜರು ಬರೆದಿದ್ದ ಪತ್ರಗಳೂ ಇದ್ದವು.

ಶ್ರೀರಾಮಕೃಷ್ಣರು ಶ್ರೀಮಾತೆಯವರಿಗೆ ಹೇಳಿದ್ದರು: ''ಇದು (ತಮ್ಮನ್ನು ತೋರಿಸುತ್ತ) ಇನ್ನೇನು ಮಾಡುವುದು? ನೀನು ಇನ್ನಷ್ಟು ಮಾಡಬೇಕಾಗಿದೆ.'' ಶ್ರೀಮಾತೆಯವರ ಜೀವನವನ್ನು ಕುರಿತು ಚಿಂತನೆ ನಡೆಸಿದಾಗ ನಮಗೆ ತಿಳಿದುಬರುವುದು, ನಿಜವಾಗಿಯೂ ಶ್ರೀರಾಮಕೃಷ್ಣರ ನಿರ್ಯಾಣದ ನಂತರ ಅವರು ಎಷ್ಟೊಂದು ಕೆಲಸ ಮಾಡಿದ್ದರು, ಎಷ್ಟೊಂದು ಮಂದಿ ಆರ್ತರ, ಅಸಹಾಯಕರ ಹಾಗೂ ದುಃಖಿತರಾದ ಜನರ ಬದುಕನ್ನು ಉದ್ಧಾರ ಮಾಡಿದ್ದರು! ನಾವು ಹೇಗೆ ಶ್ರೀಮಾತೆಯವರಿಂದ ೪೦-೪೫ ಪತ್ರಗಳನ್ನು ಪಡೆದೆವೋ, ಅದೇ ರೀತಿ ಅವರ ಅನೇಕ ಮಂದಿ ಶಿಷ್ಯಂದಿರು ಕೂಡ ಹಲವು ಪತ್ರಗಳನ್ನು ಪಡೆದಿದ್ದರು. ತಮ್ಮ ಮಕ್ಕಳ (ಶಿಷ್ಯಂದಿರ) ಮೇಲೆ ಶ್ರೀಮಾತೆಯವರಿಗೆ ಎಂಥ ವ್ಯಾಕುಲತೆ, ಮಮತೆ ಜ್ವಲಂತವಾಗಿ ವ್ಯಕ್ತವಾಗುತ್ತಿತ್ತು ಎಂಬುದನ್ನು ಅವರ ಪತ್ರಗಳಿಂದ ನಾವು ಕಂಡುಕೊಳ್ಳಬಹುದು. ಶ್ರೀಮಾತೆಯವರು ತಮ್ಮ ಕೊನೆಯ ದಿನಗಳಲ್ಲಿ ಬಾಗ್‌ಬಜಾರಿನಲ್ಲಿ ಅನಾರೋಗ್ಯದಿಂದಿದ್ದಾಗ, ನನ್ನ ಪತ್ನಿಯ ಪತ್ರಕ್ಕೆ ಹೀಗೆ ಉತ್ತರ ಬಂದಿತ್ತು: ''ಶ್ರೀಮಾತೆಯವರ ಪರಿಸ್ಥಿತಿ ಮೊದಲಿನಂತೆಯೇ ಇದೆ. ಯಾವುದೇ ಬದಲಾವಣೆ ಉಂಟಾಗಿಲ್ಲ. ದಿನದಲ್ಲಿ ಎರಡು ಬಾರಿ ಜ್ವರ ಬರುತ್ತಿದೆ. ಹೊಟ್ಟೆಯ ಹಾಗೂ ಕಾಲಿನ ಉರಿ ತುಸು ಕಡಿಮೆಯಾಗಿದೆ. ಈ ಬಾರಿ ಅಷ್ಟಮಿ, ಏಕಾದಶಿ ಕಳೆದಲ್ಲದೆ ಏನೂ ಗೊತ್ತಾಗದು.'' ಈ ಪತ್ರ ಬರೆದುದು ೧೯೨೦ರ ಜುಲೈ ೮ರಂದು. ಅದಾಗಿ ಹನ್ನೆರಡು ದಿನಗಳಲ್ಲಿ ಶ್ರೀಮಾತೆಯವರು ದೇಹತ್ಯಾಗ ಮಾಡಿದರು. ¤

---

# ಕರುಣೆಯ ಝರಿ ಶ್ರೀಮಾತೆ

ಮೂಲ ಬಂಗಾಳಿ : **ಸುರೇಶಚಂದ್ರ ಚೌಧುರಿ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ನಾ**ವು ಪೂರ್ವಬಂಗಾಳ (ಈಗಿನ ಬಾಂಗ್ಲಾದೇಶ)ದವರು. ಫರೀದ್‌ಪುರ್ ಜಿಲ್ಲೆಯ ಡಹರ್‌ಪಾಡಾ ಗ್ರಾಮದಲ್ಲಿ ನಮ್ಮ ಮನೆಯಿತ್ತು. ನನ್ನ ತಂದೆ ಗೋಪಾಲಗಂಜ್‌ನಲ್ಲಿ ಸರ್ಕಾರಿ ವಕೀಲರಾಗಿದ್ದರು. ಆದ ಕಾರಣ ನನ್ನ ಬಾಲ್ಯ ಹಾಗೂ ತಾರುಣ್ಯ ಗೋಪಾಲಗಂಜ್‌ನಲ್ಲೇ ಕಳೆಯಿತು. ನಾನು ಶಾಲೆಯಲ್ಲಿದ್ದಾಗಲೇ 'ಅನುಶೀಲನ ಸಮಿತಿ'ಯ ಸದಸ್ಯನಾಗಿದ್ದೆ; ಹಾಗೂ ಸ್ವದೇಶೀ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಕೆಲವು ದಿನಗಳ ನಂತರ ನನ್ನನ್ನು ರಾಷ್ಟ್ರದ್ರೋಹದ ಆರೋಪದ ಮೇಲೆ ಪೋಲೀಸರು ಬಂಧಿಸಿ ಕರೆದೊಯ್ದರು; ಒಂದೂವರೆ ವರ್ಷ ನಾನು ಕಾರಾಗೃಹದಲ್ಲಿ ಇರಬೇಕಾಯಿತು. ಜೈಲಿನಲ್ಲಿದ್ದಾಗ ಇನ್ನೊಬ್ಬ ಖೈದಿ, ತರುಣ ಡಾಕ್ಟರನೊಂದಿಗೆ ನನ್ನ ಸ್ನೇಹ ಬೆಳೆಯಿತು. ಅವನೂ ಸ್ವದೇಶೀ ಆಂದೋಲನದಲ್ಲಿ ತೊಡಗಿದ್ದವನು. ಆ ಡಾಕ್ಟರ್ ಸ್ನೇಹಿತನಿಂದ ನಾನು ಯಾವಾಗಲೂ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ವಿಷಯವಾಗಿ ಕೇಳಿ ತಿಳಿಯುತ್ತಿದ್ದೆ. 'ಅನುಶೀಲನ ಸಮಿತಿ'ಗೆ ಸೇರಿದ್ದರಿಂದ, ಹಾಗೂ ಸ್ವದೇಶೀ ಚಳವಳಿಯಲ್ಲಿ ಇದ್ದುದರಿಂದ ನನಗೆ ಮೊದಲೇ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಬಗ್ಗೆ ಆಸಕ್ತಿಯಿತ್ತು; ಆದರೆ ಡಾಕ್ಟರನ ಒಡನಾಟದಿಂದಾಗಿ ಈ ಆಕರ್ಷಣೆ ಇನ್ನಷ್ಟು ಅಧಿಕವಾಯಿತು. ಶ್ರೀರಾಮಕೃಷ್ಣರ ಸಹಧರ್ಮಿಣಿ ಶ್ರೀಮಾತೆ ಶಾರದಾದೇವಿಯವರು ಇನ್ನೂ ಬದುಕಿದ್ದಾರೆ, ಹಾಗೂ ನಡುನಡುವೆ ಕಲ್ಕತ್ತದಲ್ಲಿದ್ದ ತಮ್ಮ ನಿವಾಸಕ್ಕೆ ಆಗಾಗ ಬಂದು, ಅಲ್ಲಿ ತಂಗುತ್ತಾರೆ ಎಂದು ಆ ಸ್ನೇಹಿತನಿಂದಲೇ ನಾನು ಮೊದಲ ಬಾರಿಗೆ ಕೇಳಿದ್ದೆ. ಈ ವಿಷಯವನ್ನು ತಿಳಿದಂದಿನಿಂದ ನನಗೆ ಒಂದೇ ಚಿಂತೆ – ಹೇಗೆ ಮತ್ತು ಯಾವಾಗ ಶ್ರೀಮಾತೆಯವರ ದರ್ಶನ ಮಾಡಲಿ – ಎಂಬುದಾಗಿ. ಜೈಲಿನಲ್ಲಿ ಸಾಮಾನ್ಯವಾಗಿ ಸಿಗುತ್ತಿದ್ದ ಮಾಸಿಕ ಭತ್ಯೆಯನ್ನು ಸ್ವಲ್ಪ ಸ್ವಲ್ಪವೇ ನಾನು ಕೂಡಿಡುತ್ತಿದ್ದೆ ; ಬಿಡುಗಡೆ ಆದ ಕೂಡಲೇ ಶ್ರೀಮಾತೆಯವರ ದರ್ಶನ ಮಾಡಲು ಹೋಗಲು ದಾರಿ ಖರ್ಚಿಗಾಗಿ.

೧೯೧೯ರ ಮೇ ತಿಂಗಳಲ್ಲಿ ಒಂದು ಶುಭ ಮುಂಜಾನೆಯ ವೇಳೆಗೆ ಖುಲ್ನಾ ಜಿಲ್ಲೆಯ ದೌಲತ್‌ಪುರದಲ್ಲಿದ್ದ ಕಾರಾಗೃಹದಿಂದ ನನಗೆ ಬಿಡುಗಡೆಯಾಯಿತು. ಬಿಡುಗಡೆ ಆದ ಕೂಡಲೇ ಉಟ್ಟ ಬಟ್ಟೆಯಲ್ಲೇ ನಾನು ಅತ್ಯಂತ ವ್ಯಾಕುಲತೆಯಿಂದ ಹೊರಬಂದು, ಶ್ರೀಮಾತೆಯವರ ದರ್ಶನ ಪಡೆಯಲು ಹೊರಟೆ. ನಾನು ಹೋಗಬೇಕಾಗಿದ್ದುದು ಬಾಗ್‌ಬಜಾರಿನಲ್ಲಿದ್ದ 'ಉದ್ಬೋಧನ' ಕಾರ್ಯಾಲಯಕ್ಕೆ, ಅಥವಾ ಶ್ರೀಮಾತೆಯವರ ಮನೆಗೆ. ಕೊನೆಗೂ ಅಲ್ಲಿಗೆ ತಲುಪಿದೆ; ಆದರೆ ಆಗ ಅಲ್ಲಿ ಶ್ರೀಮಾತೆಯವರು ಇರಲಿಲ್ಲ. ಅವರು ಎಲ್ಲಿದ್ದಾರೆ ಎಂದು ಯಾರನ್ನೂ ಕೇಳದೆ, ನಾನು ನೇರವಾಗಿ ಶ್ಯಾಮ್‌ಬಜಾರಿನಲ್ಲಿದ್ದ ಗೌರಿ-ಮಾ ಅವರ 'ಶ್ರೀಶಾರದೇಶ್ವರಿ ಆಶ್ರಮ'ಕ್ಕೆ ಹೋದೆ. ನಾನು ಆಗಿನ್ನೂ ಹುಡುಗ; ಶ್ರೀಮಾತೆಯವರ ಹೆಸರಿನಲ್ಲಿರುವ ಆಶ್ರಮವಾದ್ದರಿಂದ ಅಲ್ಲೇ ಶ್ರೀಮಾತೆಯವರು ಇರಲೇ ಬೇಕಲ್ಲ ಎಂದು ಭಾವಿಸಿದ್ದೆ. ಶ್ರೀಮಾತೆಯವರು ಅಲ್ಲಿ ಇರಲಿಲ್ಲವೆಂದು ಮತ್ತೆ ಹೇಳುವ ಅಗತ್ಯವಿಲ್ಲ. ಆದರೆ ಅಲ್ಲಿ ಗೌರಿ-ಮಾ ಅವರ ಭೇಟಿ ಮಾಡಿದೆ. ಅವರು ನನ್ನೊಂದಿಗೆ ಬಹಳ ಹೊತ್ತು ಮಾತನಾಡಿದರು. ನನ್ನ ಕಥೆಯನ್ನೆಲ್ಲ ಕೇಳಿದ ಗೌರಿ-ಮಾ ಅವರು, ನನ್ನ ಕ್ರಾಂತಿಕಾರಿ ಮಾರ್ಗವನ್ನು ತ್ಯಜಿಸಲು ಹೇಳಿದರು. ಅವರಿಗೆ ಪ್ರಣಾಮ ಮಾಡಿ ಮತ್ತೆ ನಾನು ಹೊರಟೆ. ಆದರೆ ನಾನು ಯಾವ ಶ್ರೀಮಾತೆಯವರ ದರ್ಶನ ಪಡೆಯಲು ಬಂದಿದ್ದೆನೋ, ಅವರ ಬಗ್ಗೆ ಅಲ್ಲಿ ಯಾರ